

1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸಭೆಯನ್ನುದ್ದೇಶಿಸಿ ಮಹಾತ್ಮ ಗಾಂಧೀಜಿ ಅವರು ಮಾತನಾಡಿದ ಸ್ಥಳ. –ಪ್ರಜಾವಾಣಿ ಚಿತ್ರ

'ಅನಲ್ ಹಖ್' ಇದು ದ್ವೈತವಾದಿಗಳಾದ ಕಟ್ಟಾ ಮುಸ್ಲಿಮ ಮೌಲ್ವಿ ಮುಲ್ಲಾಗಳನ್ನು ಕೆರಳಿಸಿತು. ಅವರು ಮನಸೂರನನ್ನು ನ್ಯಾಯಸ್ಥಾನಕ್ಕೆಳೆದು ಪಾಖಂಡಿಯೆಂದು ತೀರ್ಮಾನಿಸಿ ಸಜೀವವಾಗಿ ಸುಟ್ಟರು. ಅವನ ಅವಶೇಷದ ಬಿಸಿ ಬೂದಿಯ ಮೇಲೆ ನೀರು ಚೆಲ್ಲಿದಾಗ ಎದ್ದ ಪ್ರತಿಯೊಂದು ನೀರುಳ್ಳೆಯೂ 'ಅನಲ್ ಹಖ್' ಎಂದಿತಂತೆ. ಮನಸೂರನಿಗೆ ಅನಲ್ ಹಖ್ ಹೇಗೋ ಹಾಗೆ ಕೃಷ್ಣರಾಯರಿಗೆ 'ಕನ್ನಡ'.

ಮುದವೀಡು ಕೃಷ್ಣರಾಯರು ಕೇವಲ ರಾಜಕೀಯ ವ್ಯಕ್ತಿಯಾಗಿರಲಿಲ್ಲ. ಧರ್ಮ ಕರ್ಮ ಸಂಯೋಗದಿಂದ ರಾಜಕೀಯ ಅವರಿಗೆ ಗಂಟುಬಿದ್ದಿತಷ್ಟೆ. ರಾಯರು ಸಾಹಿತ್ಯ, ಕಲೆಗಳಲ್ಲಿ ತುಂಬ ಅಭಿಮಾನ ತಳೆದಿದ್ದರು. ಅವರ ಒಂದು ನಾಟಕ 'ಕಚ ದೇವಯಾನಿ' ಜಯ ಕರ್ನಾಟಕದಲ್ಲಿ ಅಚ್ಚಾಗಿದೆ.

ರಾಯರಿಗೆ ವಯಸ್ಸಾಗುತ್ತ ಬಂತು. ಕೊನೆಯ ದಿನಗಳಲ್ಲಿ ಅವರು ಸತೀ ದ್ವಿತೀಯರಾಗಿ ಕರ್ನಾಟಕ ಪ್ರವಾಸ ಕೈಗೊಂಡರು. ಭಾರದ್ವಾಜರ ಮನೆಯಲ್ಲಿ ಬಿಡಾರ. ಅನೇಕ ಕಡೆ ಅವರಿಗೆ ಔತಣಗಳಾದುವು. ಸಾಹಿತ್ಯ ಪರಿಷತ್ತಿನ ಔತಣಕೂಟದಲ್ಲಿ ಮಾತನಾಡುತ್ತ ರಾಯರು, 'ನನಗೂ ವಯಸ್ಸಾಯಿತು, ನನ್ನ ಆರೋಗ್ಯ ಕುಂದುತ್ತಿದೆ. ನಾನು ಕಣ್ಣುಮುಚ್ಚುವ ಮುನ್ನ ನನ್ನ ಕನ್ನಡ ನಾಡನ್ನು ಕಣ್ಣುಂಬ ನೋಡಬೇಕೆಂಬ ಬಯಕೆಯಾಯಿತು. ಅನೇಕರು ಮುಕ್ತಿ ಬೇಡುತ್ತಾರೆ, ನಾನು ಬೇಡುವುದಿಲ್ಲ. ನಾನು ಇನ್ನು ಎಷ್ಟು ಜನ್ಮ ತಳೆಯಲಿ, ಈ ನನ್ನ ಕನ್ನಡ ನಾಡಿನಲ್ಲೇ ಹುಟ್ಟಬೇಕು. ಇದೇ ನನ್ನ ಪ್ರಾರ್ಥನೆ' ಎಂದು ಹೇಳಿದರು.

ಕನ್ನಡನಾಡಿನ ಎಲ್ಲ ಕನ್ನಡ ಮಕ್ಕಳಿಗೂ ಈ ಅಭಿಮಾನ ಬರಬಾರದೇ?

●

ಅ.ನ.ಕೃ. ಅವರ 'ಬರಹಗಾರನ ಬದುಕು' ಕೃತಿಯಿಂದ ಆಯ್ದಭಾಗ; ಪ್ರ: 'ವಿಶ್ವಭಾರತಿ ಪ್ರಕಾಶನ', ಖಾರೆಬಾಂದ–ಮಡಗಾಂವ.